
## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಣ್ಣೂರ, ಬೆಳಗಾವಿ

**ವರ್ಗ : 6ನೇ** **ಮೊದಲನೇ ಸಂಕಲನಾತ್ಮಕ ಪರೀಕ್ಷೆ-2022** **ಒಟ್ಟು ಅಂಕ : 40**

**ವಿಷಯ : ಗಣಿತ** **ದಿನಾಂಕ : 17/10/2022**

### ಪ್ರ. ಸಂ ೧. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ 1 X 8 = 8

1) ಒಂಭತ್ತು ಲಕ್ಷದಾ ಆರು ಸಾವಿರದ ಎಂಟು ಇದನ್ನು ಸಂಖ್ಯಾ ರೂಪದಲ್ಲಿ ಬರೆಯಿರಿ.
2) 6294ನ್ನು ನೂರರ ಸ್ಥಾನಕ್ಕೆ ಅಂದಾಜಿಸಿ.
3) "ಎಲ್ಲಾ ಧನ ಪೂರ್ಣಾಂಕಗಳು ಎಲ್ಲಾ ಋಣ ಪೂರ್ಣಾಂಕಗಳಿಗಿಂತ ಚಿಕ್ಕದಾಗಿರುತ್ತದೆ" ಈ ಹೇಳಿಕೆ ಸರಿಯೋ ತಪ್ಪೋ ತಿಳಿಸಿ.
4) 8 ಮತ್ತು 6 ರ ಮ.ಸಾ.ಅ ಕಂಡುಹಿಡಿಯಿರಿ.
5) $\frac{1}{4}$ ನ್ನು ದಶಮಾಂಶ ರೂಪದಲ್ಲಿ ಬರೆಯಿರಿ.
6)  ಈ ಚಿತ್ರದಲ್ಲಿ ಬಣ್ಣ ತುಂಬಿದ ಭಾಗವನ್ನು ಭಿನ್ನರಾಶಿಯಲ್ಲಿ ಬರೆಯಿರಿ
7) $4\frac{8}{9}$ (ನಾಲ್ಕು ಪೂರ್ಣಾಂಕ ಒಂಭತ್ತನೇಯ ಎಂಟು) ಇದು ಯಾವ ವಿಧದ ಭಿನ್ನರಾಶಿ?
8) 1 ಕಿ.ಮೀ = ________ಮೀ

### ಪ್ರ. ಸಂ. ೨. ಹೊಂದಿಸಿ ಬರೆಯಿರಿ 1 X 4 = 4


| | |
|---|---|
| 1) 1 ಮೀಟರ್ | ಎ) 0 |
| 2) $\frac{19}{4}$ | ಬಿ) 100 ಸೆಂ.ಮೀ |
| 3) (−8) + (+8) | ಸಿ) $4\frac{3}{4}$ |
| 4) $\frac{5200}{100}$ | ಡಿ) 52 |

### ಪ್ರ. ಸಂ. ೩. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ 2 X 8 = 16

1) ಮೋಹನ ಒಂದು ಡ್ರೆಸ್ ಹೊಲಿಯಲು 6 ಮೀ ಬಟ್ಟೆ ಬಳಸುತ್ತಾನೆ, 2040ಮೀ ಬಟ್ಟೆಯಲ್ಲಿ ಅಂತಹ ಎಷ್ಟು ಡ್ರೆಸ್ ಹೊಲಿಯಬಹುದು ?
2) ಈ ಸಂಖ್ಯೆಗಳನ್ನು ಸಂಖ್ಯಾ ರೇಖೆಯ ಮೇಲೆ ಗುರುತಿಸಿ : ಎ) +8 ಬಿ) −8
3) ಈ ಸಂಖ್ಯೆಗಳ ಲ.ಸಾ.ಅ ಕಂಡು ಹಿಡಿಯಿರಿ: 10, 35, 40
4) ಈ ಕೆಳಗಿನ ಕೊಷ್ಟಕವು ವಿವಿಧ ಸ್ಥಳಗಳ ದಿನವೊಂದರ ಸರಾಸರಿ ತಾಪಮಾನವನ್ನು ತಿಳಿಸುತ್ತದೆ. ಇವುಗಳನ್ನು ಇಳಿಕೆ ಕ್ರಮದಲ್ಲಿ ಜೋಡಿಸಿ ಬರೆಯಿರಿ

| ಸ್ಥಳದ ಹೆಸರು | ತಾಪಮಾನ(ಡಿಗ್ರಿ ಸೆಲ್ಸಿಯಸ್ ನಲ್ಲಿ) |
|---|---|
| ಜೈಪುರ | $9^{\circ}$ |
| ಕೊಡಗು | $15^{\circ}$ |
| ಸಿಯಾಚಿನ್ | $-10^{\circ}$ |
| ಶಿಮ್ಲಾ | $-2^{\circ}$ |

5) ಈ ಕೆಳಗಿನ ಅಪವರ್ತ ವೃಕ್ಷಗಳನ್ನು ಪೂರ್ಣಗೊಳಿಸಿ




6) $\frac{1}{4}$ ಭಿನ್ನರಾಶಿಗೆ ಸಮಾನ ಭಿನ್ನರಾಶಿಯ 2 ಚಿತ್ರಗಳನ್ನು ರಚಿಸಿ.

7) ರಶ್ಮಿಯ ಬ್ಯಾಂಕ ಖಾತಗೆ 10000 ರೂ ಜಮೆ ಆಗಿವೆ, ಅದರಲ್ಲಿ ಅವಳ ತಂದೆಗೆ 5000 ರೂ ಗಳನ್ನು ಮನೆಯ ಖರ್ಚಿಗೆಂದು ಬಳಸಲು ತೆಗೆದು ಕೊಟ್ಟಳು, ಈ ಲೆಕ್ಕದಲ್ಲಿ ಧನ ಪೂರ್ಣಾಂಕ ಮತ್ತು ಋಣ ಪೂರ್ಣಾಂಕಗಳಾವುವು ಎಂಬುದನ್ನು ತಿಳಿಸಿ, ಹಾಗೂ ಈಗ ಅವಳ ಖಾತೆಯಲ್ಲಿ ಉಳಿದ ಹಣವೆಷ್ಟು ಲೆಕ್ಕಿಸಿ?

8) ನಿನ್ನ ತಾಯಿ ನಿನಗೆ ಅಂಗಡಿಗೆ ಹೋಗಿ 20 ಕೆ.ಜಿ ಸಕ್ಕರೆ ತೆಗೆದು ಕೊಂಡು ಬಾ ಎಂದು ಹೇಳುತ್ತಾಳೆ, 20 ಕೆ.ಜಿ ಸಕ್ಕರೆಯನ್ನು ಗ್ರಾಂ ಗಳಿಗೆ ಬದಲಾಯಿಸಿದರೆ ನೀನು ಅಂಗಡಿಯಿಂದ ಎಷ್ಟು ಗ್ರಾಂ ಸಕ್ಕರೆ ತಂದಂತಾಯಿತು?

## ಪ್ರ. ಸಂ. ೪. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ 4 X 3 = 12

1) ಒಬ್ಬ ತೆಂಗಿನ ಕಾಯಿ ವ್ಯಾಪಾರಿಯ ಹತ್ತಿರ 45696 ತೆಂಗಿನ ಕಾಯಿಗಳು ಇದ್ದವು ಅವನು ಪೇಟೆಯಿಂದ 42890 ತೆಂಗಿನ ಕಾಯಿಗಳನ್ನು ಖರೀದಿಸಿ ತಂದನು. ಅದರಲ್ಲಿ ಆ ತಿಂಗಳಿನಲ್ಲಿ 82970 ತೆಂಗಿನ ಕಾಯಿಗಳನ್ನು ಮಾರಿದನು ಹಾಗಾದರೆ ಆ ವ್ಯಾಪಾರಿಯ ಹತ್ತಿರ ಉಳಿದ ತೆಂಗಿನ ಕಾಯಿಗಳ ಸಂಖ್ಯೆ ಎಷ್ಟು?

2) ನೀನು ಮತ್ತ ನಿನ್ನ ಗೆಳೆಯ ಒಂದು ಹೋಟೆಲ್ ಗೆ ಹೋಗಿ ಒಂದು ದೋಸೆಯನ್ನು ತೆಗೆದುಕೊಂಡು ಅದರಲ್ಲಿ ¾ ಭಾಗದಷ್ಟು ನಿನ್ನ ಗೆಳೆಯ ತಿಂದರೆ ನೀನು ತಿಂದ ಭಾಗ ಎಷ್ಟು?

3) ವೇದಾಳು 5 ಕಿ.ಗ್ರಾಂ 200 ಗ್ರಾಂ ತೂಕವಿರುವ ಒಂದು ಕಲ್ಲಂಗಡಿ ಹಣ್ಣನ್ನು ಕೊಂಡಳು ಅದರಲ್ಲಿ 2 ಕಿ.ಗ್ರಾಂ 750 ಗ್ರಾಂ ನಷ್ಟು ತೂಕದ ಹಣ್ಣನ್ನು ಪಕ್ಕದ ಮನೆಯವರಿಗೆ ಕೊಟ್ಟರೆ ವೇದಾಳಲ್ಲಿ ಉಳಿದ ಕಲ್ಲಂಗಡಿ ಹಣ್ಣಿನ ತೂಕವೆಷ್ಟು?